# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಶರವಣ ಟಿ.ಎ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **320** |
| ಉತ್ತರಿಸಬೇಕಾದ ದಿನಾಂಕ | : | 21.12.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ವಸತಿ ಇಲಾಖೆಗೆ 2022-23 ನೇ ಸಾಲಿನಲ್ಲಿ ಒದಗಿಸಿರುವ ಬಜೆಟ್ ಹಣ ಎಷ್ಟು; ನವೆಂಬರ್ ಕೊನೆಯವರೆಗೆ ಖರ್ಚು ಮಾಡಿರುವ ಹಣ ಎಷ್ಟು;</td><td>2022-23 ನೇ ಸಾಲಿನ ಆಯವ್ಯಯದಲ್ಲಿ ವಸತಿ ಇಲಾಖೆಗೆ ರೂ.3194.91 ಕೋಟಿಗಳನ್ನು ಒದಗಿಸಲಾಗಿರುತ್ತದೆ. ಸದರಿ ಅನುದಾನದಲ್ಲಿ ರೂ. 1419.92 ಕೋಟಿಗಳನ್ನು ಖರ್ಚು ಮಾಡಲಾಗಿದೆ.</td></tr>
<tr><td>ಆ)</td><td>ಪ್ರಸಕ್ತ ಆರ್ಥಿಕ ವರ್ಷದಲ್ಲಿ 5 ಲಕ್ಷ ಮನೆಗಳ ನಿರ್ಮಾಣಕ್ಕೆ 6612 ಕೋಟಿ ಬಜೆಟ್‌ನಲ್ಲಿ ಮಂಜೂರಾಗಿದ್ದು, ನವೆಂಬರ್ 30 ರವರೆಗೆ ವಿತರಣೆ ಆಗಿರುವ ಮತ್ತು ವಿತರಣೆಗೆ ಸಿದ್ಧವಾಗಿರುವ ಮನೆಗಳ ಸಂಖ್ಯೆ ಎಷ್ಟು; ಖರ್ಚಾಗಿರುವ ಹಣ ಎಷ್ಟು;</td><td>ಮಂಜೂರು ಮಾಡಲಾದ 5 ಲಕ್ಷ ಹೊಸ ಮನೆಗಳ ಗುರಿಗಳ ಪೈಕಿ ನವೆಂಬರ್ 30 ರವರೆಗೆ 2,02,988 ಮನೆಗಳು ಆಯ್ಕೆಯಾಗಿರುತ್ತವೆ ಇನ್ನುಳಿದ ಮನೆಗಳಿಗೆ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. ಆಯ್ಕೆಯಾಗಿರುವ ಮನೆಗಳ ಭೌತಿಕ ವಿವರ ಈ ಕೆಳಗಿನಂತಿದೆ.<br><br>
<table>
<tr><th>ಅನುಮೋದನೆಗೊಂಡ ಮನಗಳು</th><th>ಪೂರ್ಣ</th><th>ಪ್ರಗತಿ ವಿವಿಧ ಹಂತ</th><th>ಪ್ರಾರಂಭವಾಗಬೇಕಿರುವ ಮನೆಗಳು</th><th>ತಡೆಹಿಡಿಯಲಾದ ಮನೆಗಳು</th></tr>
<tr><td>202988</td><td>11880</td><td>82115</td><td>106821</td><td>2172</td></tr>
</table>
<br>ಖರ್ಚಾಗಿರುವ ಮೊತ್ತ ರೂ415.62ಕೋಟಿಗಳಾಗಿರುತ್ತದೆ.</td></tr>
<tr><td>ಇ)</td><td>ವಸತಿ ಇಲಾಖೆಗೆ ನಿಗದಿತ ಗುರಿ ಮುಟ್ಟಲು ವಿಳಂಬವಾಗುತ್ತಿದ್ದು ಘೋಷಿತ ಯೋಜನೆಗಳು ಸಕಾಲಕ್ಕೆ ಪೂರ್ಣವಾಗಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ?</td><td>2022-23 ನೇ ಆರ್ಥಿಕ ವರ್ಷದಲ್ಲಿ ವಿವಿಧ ವಸತಿ ಯೋಜನೆಗಳಡಿ 3 ಲಕ್ಷ ಮನೆ ನಿರ್ಮಾಣದ MPIC ಗುರಿಯನ್ನು ನಿಗಧಿಪಡಿಸಿದ್ದು, ಸದರಿ ಗುರಿಗೆ ಎದುರಾಗಿ ನವೆಂಬರ್-2022 ರ ಅಂತ್ಯಕ್ಕೆ ಒಟ್ಟು 1.15 ಲಕ್ಷ ಮನೆಗಳನ್ನು ಪೂರ್ಣಗೊಳಿಸಲಾಗಿದೆ.<br><br>ಫಲಾನುಭವಿಗಳೇ ಮನೆಗಳನ್ನು ಸ್ವತಃ ನಿರ್ಮಿಸಿಕೊಳ್ಳುತ್ತಿದ್ದು, ನಿಗಧಿಪಡಿಸಿದ ಕಾಲಮಿತಿಯೊಳಗಾಗಿ ಮನೆಗಳನ್ನು ಪೂರ್ಣಗೊಳಿಸುವಂತೆ ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ ಹಿಂಬಾಲಿಕ ಕ್ರಮ ಕೈಗೊಳ್ಳಲಾಗುತ್ತಿದ್ದು, ಘೋಷಿತ ಯೋಜನೆಗಳು ಸಕಾಲಕ್ಕೆ ಪೂರ್ಣಗೊಳಸಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.</td></tr>
</table>

ಸಂಖ್ಯೆ :ವಇ 516 ಹೆಚ್‌ಎಎಂ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು